ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 2/6/2020

# ಸಂತ್ರಸ್ತರಿಗೆ ನೋಟಿಸ್ ಗುಮ್ಮ!

## ... ಬಿಡುಗಡೆ ಮಾಡಿಲ್ಲ, ... ಕಟ್ಟಿಲ್ಲವೆಂಬ ಆಕ್ಷೇಪ

## ಸರಕಾರದ ಎಚ್ಚರಿಕೆ ಪತ್ರಕ್ಕೆ ಪ್ರವಾಹಪೀಡಿತರು ಕಂಗಾಲು

ಪ್ರಮೋದ ಹರಿಕಾಂತ ಬೆಳಗಾವಿ
pramod.harikant@timesgroup.com

ರಾಜ್ಯದಲ್ಲಿ ಕಳೆದ ವರ್ಷದ ಆಗಸ್ಟ್‌ನಲ್ಲಿ ಭೀಕರ ಪ್ರವಾಹ ಬಂದಾಗ 'ಪರಿಹಾರ ರೂಪದಲ್ಲಿ ಹಣ ಕೊಡುತ್ತೇವೆ, ಮನೆ ನಿರ್ಮಿಸಿಕೊಳ್ಳಿ' ಎಂದಿತ್ತು ರಾಜ್ಯ ಸರಕಾರ. ಈಗ ಇನ್ನೊಂದು ಮಳೆಗಾಲ ಆರಂಭವಾಗುತ್ತಿರುವ ಹೊತ್ತಿನಲ್ಲಿ ಪೂರ್ತಿ ಹಣವನ್ನೂ ಕೊಡದೆ 'ಮನೆ ಏಕೆ ನಿರ್ಮಿಸಿಕೊಂಡಿಲ್ಲ?' ಎಂದು ಪ್ರವಾಹ ಸಂತ್ರಸ್ತರಿಗೆ ಎಚ್ಚರಿಕೆಯ ನೋಟಿಸ್ ಕೊಟ್ಟಿದೆ!

ಹೌದು. ಪ್ರವಾಹದಲ್ಲಿ ಮನೆ ಕಳೆದುಕೊಂಡಿದ್ದ ಸಂತ್ರಸ್ತರಿಗೆ ಮನೆ ನಿರ್ಮಿಸಿಕೊಳ್ಳಲು ರಾಜ್ಯ ಸರಕಾರ 10 ತಿಂಗಳು ಕಾಲಾವಕಾಶ ಕೊಟ್ಟಿತ್ತು. ಆ ಅವಧಿ ಇನ್ನೇನು ಮುಕ್ತಾಯವಾಗುತ್ತಿದೆ. ಆದರೆ ಎಲ್ಲಿಯೂ ಮನೆ ನಿರ್ಮಾಣ ಪೂರ್ಣಗೊಂಡಿಲ್ಲ. ಹೀಗಿದ್ದರೂ, ಇನ್ನೂ ಏಕೆ ಮನೆ ನಿರ್ಮಿಸಿಕೊಂಡಿಲ್ಲ ಎಂದು ಪ್ರಶ್ನೆ ಮಾಡಿ ಗ್ರಾಮ ಪಂಚಾಯಿತಿಯಿಂದ ನೋಟಿಸ್ ಜಾರಿ ಮಾಡಲಾಗಿದೆ. »3

ಸಾಂದರ್ಭಿಕ ಚಿತ್ರ




ಪ್ರವಾಹದ ಹೊಡೆತಕ್ಕೆ 50 ಸಾವಿರಕ್ಕೂ ಹೆಚ್ಚು ಜನ ಸೂರಿಲ್ಲದೆ ಬಾಡಿಗೆ ಮನೆ, ಶೆಡ್‌ಗಳಲ್ಲಿ ಜೀವನ ನಡೆಸುತ್ತಿದ್ದಾರೆ. ಅವರೆಲ್ಲರ ಸ್ಥಿತಿ ಈಗ ಚಿಂತಾಜನಕವಾಗಿದೆ. ಈ ವರ್ಷ ವಾಡಿಕೆಯಷ್ಟು ಮಳೆಯಾದರೂ ಅದೇ ಸಂತ್ರಸ್ತರು ಮತ್ತೆ ಕಾಳಜಿ ಕೇಂದ್ರ ಸೇರುವ ಸ್ಥಿತಿ ಸೃಷ್ಟಿಯಾಗುವ ಆತಂಕ ಇದೆ.



**11,000** ಹಾನಿಯಾದ ಒಟ್ಟು ಮನೆ

**9,000** ಬೆಳಗಾವಿ ಜಿಲ್ಲೆಯಲ್ಲಿ

**32,000** ಭಾಗಶಃ ಹಾನಿಯಾದವು

ಹಾನಿ ಸಂಭವಿಸಿದ ಜಿಲ್ಲೆಗಳು
ಬೆಳಗಾವಿ,
ವಿಜಯಪುರ,
ಬಾಗಲಕೋಟೆ,
ಉತ್ತರ ಕನ್ನಡ



ರಾಜ್ಯ ಸರಕಾರ ಪೂರ್ಣ ಮನೆ ಬಿದ್ದವರಿಗೆ 5 ಲಕ್ಷ ರೂ. ಮತ್ತು 50 ಸಾವಿರ ರೂ, ಭಾಗಶಃ ಹಾನಿಯಾಗಿದ್ದರೆ 3 ಲಕ್ಷ ರೂ., ಅಲ್ಪ ಹಾನಿ ಆಗಿದ್ದರೆ 50 ಸಾವಿರ ರೂ. ಪರಿಹಾರ ಘೋಷಣೆ ಮಾಡಿದೆ. ಅಲ್ಲದೆ, ಮನೆ ನಿರ್ಮಿಸಿಕೊಳ್ಳಲು 10 ತಿಂಗಳ ಗಡುವು ನೀಡಿತ್ತು. ಪರಿಹಾರ ವಿತರಣೆಯಲ್ಲಿ ಆದ ಮಹಾ ವಿಳಂಬ ನೀತಿಯಿಂದಾಗಿ ಸಂತ್ರಸ್ತರು ಮತ್ತೊಂದು ಮಳೆಗಾಲ ಗುಡಿಸಲಿನಲ್ಲಿಯೇ ಇರುವಂತಾಗಿದೆ. ರಾಜ್ಯ ಸರಕಾರ ಕೊಡುವ ಬಾಡಿಗೆ 10 ತಿಂಗಳಿಗೆ ಮುಗಿಯಲಿದೆ. ಕೆಲವರಿಗೆ ಬಾಡಿಗೆ ಹಣ ಸಹ ಕೊಟ್ಟಿಲ್ಲ, ಕೊರೊನಾ ಆರ್ಥಿಕ ಹೊಡೆತ ಕೊಟ್ಟಿದೆ. ಇದರಿಂದ ಸಂತ್ರಸ್ತರಿಗೆ ಮನೆ ಬಾಡಿಗೆ ಕಟ್ಟುವುದಕ್ಕೂ ಹಣವಿಲ್ಲದಾಗಿದೆ.

ರಾಜ್ಯ ಸರಕಾರ ಪ್ರವಾಹ ಸಂತ್ರಸ್ತರಿಗೆ ಮೊದಲ ಕಂತು ಬಿಟ್ಟು ಮುಂದಿನ ಕಂತಿನ ಹಣವನ್ನು ಸರಿಯಾಗಿ ಕೊಟ್ಟೇ ಇಲ್ಲ. ಹಣ ಕೊಡದೆಯೇ ಮನೆ ಏಕೆ ನಿರ್ಮಿಸಿಕೊಂಡಿಲ್ಲ ಎಂದು ನೋಟಿಸ್ ಕೊಟ್ಟವರಿಗೆ ಏನು ಹೇಳಬೇಕು? ಕೊರೊನಾ ಸಂದರ್ಭದಲ್ಲಿ ಕಾರ್ಮಿಕರಿಗೆ ಟೋಪಿ ಹಾಕಿದ ರೀತಿಯಲ್ಲಿಯೇ ಪ್ರವಾಹ ಸಂತ್ರಸ್ತರಿಗೂ ರಾಜ್ಯ ಸರಕಾರ ಟೋಪಿ ಹಾಕುತ್ತಿದೆ.

-ಎಚ್.ಡಿ. ಕುಮಾರಸ್ವಾಮಿ
ಮಾಜಿ ಮುಖ್ಯಮಂತ್ರಿ

# ಸಂತ್ರಸ್ತರಿಗೆ ನೋಟಿಸ್ ಗುಮ್ಮ!

» ಮೊದಲ ಪುಟದಿಂದ

ಸರಕಾರದ ಸೂಚನೆ ಪಾಲನೆಗಾಗಿ ಕೆಲ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸಂತ್ರಸ್ತರನ್ನು ಭೇಟಿ ಮಾಡಿ ಬೇಗ ಮನೆ ನಿರ್ಮಿಸಿಕೊಳ್ಳುವಂತೆ ಒತ್ತಡ ಹಾಕುತ್ತಿದ್ದಾರೆ. ಇದು ಸಂತ್ರಸ್ತರನ್ನು ಕಂಗಾಲಾಗಿಸಿದೆ. ವಾಸ್ತವದಲ್ಲಿ ರಾಜ್ಯದಲ್ಲಿ ಯಾವೊಬ್ಬ ಸಂತ್ರಸ್ತರಿಗೂ ಪೂರ್ಣ ಪರಿಹಾರ ವಿತರಣೆ ಆಗಿಯೇ ಇಲ್ಲ. ಬಹುತೇಕ ಮನೆಗಳು ತಳಪಾಯ, ಗೋಡೆ ಹಂತದಲ್ಲಿಯೇ ಇವೆ. ಅದರಲ್ಲಿ ಸರಕಾರದ ಪರಿಹಾರಕ್ಕಿಂತ ಜನರು ಸ್ವಂತ ಹಣವನ್ನೇ ಹೆಚ್ಚು ವಿನಿಯೋಗಿಸಿದ್ದಾರೆ. ತಳಪಾಯವಾದ ಬಳಿಕ ಮೊದಲ ಕಂತು, ಗೋಡೆಯಾದ ಬಳಿಕ ಎರಡನೇ ಕಂತು ಕೊಡುವುದಾಗಿ ಸರಕಾರ ಹೇಳಿತ್ತು. ಆದರೆ, ಎಷ್ಟೋ ಮನೆಗಳು ತಳಪಾಯ ಆಗಿ ತಿಂಗಳು ಕಳೆದರೂ 2ನೇ ಕಂತು ಕೊಟ್ಟಿಲ್ಲ. ಒಂದೊಂದು ತಿಂಗಳು ವಿಳಂಬ ಮಾಡಲಾಗುತ್ತಿದೆ. ಕೆಲವರಿಗಂತೂ ಮೊದಲ ಕಂತಿನ ಹಣವೇ ಸಿಕ್ಕಿಲ್ಲ, ಇನ್ನೊಂದೆಡೆ ಮತ್ತೊಂದು ಮಳೆಗಾಲ ಬಂದೇ ಬಿಟ್ಟಿದೆ. ಸರಕಾರದ ಪರಿಹಾರ ನಂಬಿ ಜನರು ಇದ್ದ ಹಣವನ್ನೆಲ್ಲ ಮನೆ ನಿರ್ಮಾಣಕ್ಕೆ ಬಳಸಿದ್ದಾರೆ. ಕೊರೊನಾ ಬಂದು ತುತ್ತು ಅನ್ನಕ್ಕೂ ತತ್ವಾರ ಮಾಡಿದೆ. ಹೀಗಿರುವಾಗ ಜ್ಞಾಪನಾಪತ್ರದ ರೂಪದಲ್ಲಿ ಕಾರಣ ಕೇಳಿ ನೋಟಿಸ್ ಕೊಟ್ಟಿದ್ದರಿಂದ ಸಂತ್ರಸ್ತರು ಹೆದರಿ ಕಂಗಾಲಾಗಿದ್ದಾರೆ.

**ಆಮೆ ಗತಿ ಕೆಲಸ:** ಪ್ರವಾಹ ಸಂತ್ರಸ್ತರಿಗೆ ರಾಜ್ಯ ಸರಕಾರ 2019ರ ಅಕ್ಟೋಬರ್‌ನಲ್ಲಿ ಪರಿಹಾರ ಘೋಷಣೆ ಮಾಡಿದರೂ, ಮೊದಲ ಕಂತಿನ ಪರಿಹಾರ ಸಿಕ್ಕಿದ್ದು 2019ರ ಕೊನೆಗೆ. ಅದಾದ ಬಳಿಕ ಅರ್ಹರ ಆಯ್ಕೆಯಲ್ಲಿ ಎಡವಟ್ಟಾಗಿದ್ದರಿಂದ 2020ರ ಫೆಬ್ರವರಿಯಲ್ಲಿ ಹಲವರಿಗೆ ಮೊದಲ ಕಂತು ಕೊಡಲಾಗಿದೆ. ಕೆಲವರು ದಾಖಲೆ ಹೊಂದಿಸಲಾಗದೆ ಇನ್ನೂ ಪರಿಹಾರ ಪಡೆದಿಲ್ಲ. ಈಗಂತೂ ತಳಪಾಯ ಜಿಪಿಎಸ್ ಆದರೂ ಎರಡನೇ ಕಂತು ಬರುವಷ್ಟರಲ್ಲಿ ಒಂದು ತಿಂಗಳ ಸಮಯ ತಗಲುತ್ತಿದೆ. ಗ್ರಾಮ ಪಂಚಾಯಿತಿ, ತಹಸೀಲ್ದಾರ್ ಕಚೇರಿ ಹಂತದಲ್ಲಿಯೇ ದಾಖಲೆಗಳು ಸಿಕ್ಕಿ ಬೀಳುತ್ತಿವೆ.